ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

S

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE: 16/3/21

# ಪ್ರಶ್ನೆ ಕೇಳಲು ನಿರಾಕರಣೆ

ಉವಾ 16/3/21

ವಿಧಾನ ಪರಿಷತ್ತು: ತಮ್ಮ ಬಗ್ಗೆ ಯಾವುದೇ ರೀತಿಯ ಮಾನಹಾನಿಕಾರಕ ಸುದ್ದಿಗಳು ಪ್ರಸಾರವಾಗದಂತೆ ಕೋರ್ಟ್‌ನಿಂದ ತಡೆಯಾಜ್ಞೆ ತಂದ ಸಚಿವರಿಗೆ ಸೋಮವಾರ ಮೇಲ್ಮನೆಯಲ್ಲೂ ಪ್ರತಿಪಕ್ಷ ಸದಸ್ಯರು ಪ್ರಶ್ನೆ ಕೇಳಲು ನಿರಾಕರಿಸಿದರು. ಪ್ರತಿಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ಪ್ರಶ್ನೋತ್ತರ ವೇಳೆಯಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಚುಕ್ಕೆಗುರುತಿನ ಪ್ರಶ್ನೆ ಕೇಳಿದ್ದರು. ಅದಕ್ಕೆ ಸಚಿವ ಸುಧಾಕರ್ ಲಿಖಿತ ಉತ್ತರವನ್ನೂ ನೀಡಿದ್ದರು. ಆದರೆ, ಪ್ರಶ್ನೆ ಕೇಳಲು ನಿರಾಕರಿಸಿದರು. ಅಲ್ಲದೆ, 'ಇಂತಹ ಸಚಿವರುಗಳಿಗೆ ನಾನು ಪ್ರಶ್ನೆ ಕೇಳುವುದಿಲ್ಲ ಎಂದು ಟೀಕಿಸಿದರು. ಆಗ, ಸಚಿವರಾದ ಡಾ.ಕೆ. ಸುಧಾಕರ್, ನಾರಾಯಣಗೌಡ, ಬಿ.ಸಿ. ಪಾಟೀಲ್, 'ನಿಮ್ಮ ಪಕ್ಷದವರು ಈ ಹಿಂದೆ ಯಾರೂ ನಿರೀಕ್ಷಣಾ ಜಾಮೀನು ಪಡೆದೇ ಇಲ್ಲವೇ? ಎಂದರು. ಈ ವೇಳೆ ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಈ ಮಧ್ಯೆ ಅದೇ ಸುಧಾಕರ್ ಅವರಿಗೆ ಚುಕ್ಕೆಗುರುತಿನ ಪ್ರಶ್ನೆ ಕೇಳಬೇಕಿದ್ದ ಕಾಂಗ್ರೆಸ್ ಸದಸ್ಯ ಅಲ್ಲಂ ವೀರಭದ್ರಪ್ಪ ತಡವಾಗಿ ಮೇಲ್ಮನೆ ಪ್ರವೇಶಿಸಿದರು.